ಓ ಎಸ್ ನಂ.35/2021
ಡಿ.ಡಬ್ಲ್ಯೂ-1 ಮುಖೇಶ ತಂದೆ ಖಂಡು ಪಾಳವೆ

**(ಇಂದು ದಿನಾಂಕಃ 24-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ್ ಎಸ್ ಪಿ ವಕೀಲರ ಪರ ಶ್ರೀ ಎಂ ಎಸ್ ಕೆ ವಕೀಲರಿಂದ.

ನಾನು ಮುಟೇಷನ್ ನ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅನ್ನು ನಿಡಿ-೧ ಎಂದು ಗುರುತಿಸಲಾಯಿತು.

ನಾನು ಪಹಣಿಗಳ ದೃಡಿಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಡಿ-೨ ರಿಂದ ನಿಡಿ-೫ ಎಂದು ಗುರುತಿಸಲಾಯಿತು.

ನಾನು ಮುಟೇಷನ್ ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೬ ಎಂದು, ಪಹಣಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಡಿ-೭ ರಿಂದ ನಿಡಿ-೧೯ ಎಂದು ಗುರುತಿಸಲಾಯಿತು.

ನಾನು ಪಹಣಿಗಳ ದೃಡಿಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಡಿ-೨೦ ರಿಂದ ನಿಡಿ-೨೫ ಎಂದು ಗುರುತಿಸಲಾಯಿತು.

ನಾನು ಮುಟೇಷನ್ ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೨೬ ಎಂದು, ಪಹಣಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಡಿ-೨೭ ರಿಂದ ನಿಡಿ-೪೭ ಎಂದು ಗುರುತಿಸಲಾಯಿತು.

ನಾನು ಪಹಣಿಗಳ ದೃಡಿಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಡಿ-೪೮ ರಿಂದ ನಿಡಿ-೫೩ ಎಂದು ಗುರುತಿಸಲಾಯಿತು.

ನಾನು ಮುಟೇಷನ್ ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೫೪ ಎಂದು, ಪಹಣಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಡಿ-೫೫ ರಿಂದ ನಿಡಿ-೭೬ ಎಂದು ಗುರುತಿಸಲಾಯಿತು.

ದಿನಾಂಕ 23-01-2023 ರ ಖರೀದಿ ಪತ್ರ್ರದ ಆನಲೈನ್ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-೭೭ ಎಂದು ಗುರುತಿಸಲಾಯಿತು.

ಮುಟೇಷನ್ ಹಾಜರುಪಡಿಸಿದ್ದು, ಅದನ್ನು ನಿಡಿ-೭೮ ಎಂದು, ದಿನಾಂಕ 27-10-2022 ರ ಖರೀದಿ ಪತ್ರ್ರದ ಆನಲೈನ್ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-೭೯ ಎಂದು ಗುರುತಿಸಲಾಯಿತು.

ಮುಟೇಷನ್ ಹಾಜರುಪಡಿಸಿದ್ದು, ಅದನ್ನು ನಿಡಿ-೮೦ ಎಂದು, ಪಹಣಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಡಿ-೮೧ ರಿಂದ ನಿಡಿ-೮೩ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಎಸ್ ಜಿ ಹೆಚ್ ವಕೀಲರಿಂದ.</u>

ನನ್ನ ಅಜ್ಜ ಯಶವಂತರವರು ಈಗ ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ಅಜ್ಜಿಯಾದ ಅಂಬುಬಾಯಿರವರೂ ಕೂಡಾ ಈಗ ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ಅಜ್ಜನಿಗೆ ವಾದಿಯಾದ ರುಕ್ಮಬಾಯಿ ಮತ್ತು ನನ್ನ ತಂದೆಯಾದ ೧ನೇ ಪ್ರತಿವಾದಿಯಾದ ಖಂಡುರವರು ೨ ಜನ ಮಕ್ಕಳು ಎಂದರೆ ಸರಿ. ೨ನೇ ಪ್ರತಿವಾದಿಯಾದ ಗಂಗಾಬಾಯಿರವರು ನನ್ನ ತಾಯಿಯಾಗಿರುತ್ತಾರೆ. ನನ್ನ ತಂದೆಗೆ ನಾನು ಒಬ್ಬನೆ ಮಗ ಎಂದರೆ ಸರಿ. ನನ್ನ ತಂದೆ ಬೇರೆಯವರ ಆಕಳು ಕಾಯುತ್ತಿದ್ದರು ಎಂದರೆ ಸರಿ. ನಂತರ ನಮ್ಮ ತಂದೆಯ ೨ ಕಣ್ಣುಗಳು ಹೋಗಿರುತ್ತವೆ ಎಂದರೆ ಸರಿ. ನನ್ನ ತಂದೆ ಈಗ ಎಲ್ಲಿಗೂ ಹೋಗದೆ ಮನೆಯಲ್ಲಿಯೆ

ಇರುತ್ತಾರೆ ಎಂದರೆ ಸರಿ. ನನ್ನ ಅತ್ತೆಯಾದ ವಾದಿಗೂ ಕೂಡಾ ಕಣ್ಣುಗಳು ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ಹಿರಿಯರಿಂದ ಬಂದಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ತಂದೆಯವರು ಗಳಿಸಿರುವ ಆಸ್ತಿಗಳು ಆಗಿರುತ್ತವೆ ಎನ್ನುತ್ತಾರೆ. ನಮ್ಮ ತಂದೆಯವರು ದಾವಾ ಆಸ್ತಿಗಳನ್ನು ಖರೀದಿಸಿದ ಕುರಿತು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಹೇಳಿದಂತೆ ನಮ್ಮ ತಂದೆ ದಾವಾ ಆಸ್ತಿಗಳನ್ನು ಖರೀದಿಸಿಲ್ಲ ಎಂದರೆ ಸರಿಯಲ್ಲ.

೨. ನಮ್ಮ ತಂದೆಯವರು ದಾವಾ ಆಸ್ತಿಗಳನ್ನು ಯಾರಿಂದ ಮತ್ತು ಯಾವ ವರ್ಷ ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ನಾನು ಹುಟ್ಟುವ ಮೊದಲೆ ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿಗಳನ್ನು ಯಾರಿಂದ ನಮ್ಮ ತಂದೆ ಖರೀದಿಸಿರುತ್ತಾರೆ ಎಂದು ದಾವೆ ಹೂಡಿದ ನಂತರ ನಾನು ತಿಳಿದುಕೊಂಡಿಲ್ಲ. ಸಾಕ್ಷಿಯು ವಿಠಬಾಯಿರವರಿಂದ ಸರ್ವೆ ನಂಬರ ೩೫೫ ರಲ್ಲಿ ೯ ಎಕರೆ ಜಮೀನು ಖರೀದಿ ಮಾಡಿದ ಬಗ್ಗೆ ಮಾತ್ರ ನನಗೆ ಗೊತ್ತು ಎನ್ನುತ್ತಾರೆ. ನಮ್ಮ ತಂದೆ ಸರ್ವೆ ನಂಬರ ೩೪೦ ಮತ್ತು ೩೪೧ ಜಮೀನುಗಳ ಆದಾಯದಿಂದ ಸರ್ವೆ ನಂಬರ ೩೫೫ ರ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

೩. ನಮ್ಮ ತಂದೆಯವರು ದಾವಾ ಜಮೀನುಗಳನ್ನು ನಮ್ಮ ತಾಯಿಯ ಹೆಸರಿನಲ್ಲಿ ಮಾಡಿದ್ದರು ಎಂದರೆ ಸರಿ. ಈ ದಾವೆ ಹೂಡಿದ ನಂತರ ನಮ್ಮ ತಾಯಿ ಸರ್ವೆ ನಂಬರ ೩೪೦/೨ ರ ದಾವಾ ಜಮೀನನ್ನು ೫ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ದಾವೆ ಹೂಡುವ ಮೊದಲೆ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ನಮ್ಮ ತಾಯಿಯಾದ ೨ನೇ ಪ್ರತಿವಾದಿ ಸರ್ವೆ ನಂಬರ ೩೫೫/೫ ರ ದಾವಾ ಜಮೀನಿನಲ್ಲಿ ೩ ಎಕರೆ

೧೦ ಗುಂಟೆ ಜಮೀನನ್ನು ಈ ದಾವೆ ಹೂಡಿದ ನಂತರ ೬ನೇ ಪ್ರತಿವಾದಿಯಾದ ಯಲ್ಲಾಲಿಂಗರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ದಾವೆ ಹೂಡುವ ಮೊದಲೆ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ದಿನಾಂಕ 25-10-2022 ರಂದು ನಮ್ಮ ತಾಯಿ ಸರ್ವೆ ನಂಬರ ೩೫೫/೫ ರ ದಾವಾ ಜಮೀನಿನಲ್ಲಿ ೮ ಎಕರೆ ೨೯ ಗುಂಟೆ ಜಮೀನನ್ನು ೭ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

೪. ದಿನಾಂಕ 27-10-2022 ರಂದು ನಮ್ಮ ತಾಯಿ ಸರ್ವೆ ನಂಬರ ೩೪೦/೨ ರ ದಾವಾ ಜಮೀನನ್ನು ೫ನೇ ಪ್ರತಿವಾದಿಗೆ ಮಾರಾಟ ಮಾಡಿದ ಕುರಿತು ಈಗ ನನಗೆ ತೋರಿಸಿದ ಖರೀದಿ ಪತ್ರದಲ್ಲಿ ನಮೂದು ಇದೆ ಎಂದರೆ ಸರಿ.

ದಿನಾಂಕ 25-10-2022 ರಂದು ನಮ್ಮ ತಾಯಿ ಸರ್ವೆ ನಂಬರ ೩೫೫/೫ ರಲ್ಲಿ ೩ ಎಕರೆ ೧೦ ಗುಂಟೆ ದಾವಾ ಜಮೀನನ್ನು ೬ನೇ ಪ್ರತಿವಾದಿಯಾದ ಯಲ್ಲಾಲಿಂಗರವರಿಗೆ ಮಾರಾಟ ಮಾಡಿದ ಕುರಿತು ಈಗ ನನಗೆ ತೋರಿಸಿದ ಖರೀದಿ ಪತ್ರದಲ್ಲಿ ನಮೂದು ಇದೆ ಎಂದರೆ ಸರಿ.

ದಿನಾಂಕ 23-10-2023 ರಂದು ನಮ್ಮ ತಾಯಿ ಸರ್ವೆ ನಂಬರ ೩೫೫/೫ ರಲ್ಲಿ ೩ ಎಕರೆ ೧೯ ಗುಂಟೆ ದಾವಾ ಜಮೀನನ್ನು ೮ನೇ ಪ್ರತಿವಾದಿಯಾದ ರಾಜುರವರಿಗೆ ಮಾರಾಟ ಮಾಡಿದ ಕುರಿತು ಈಗ ನನಗೆ ತೋರಿಸಿದ ಖರೀದಿ ಪತ್ರದಲ್ಲಿ ನಮೂದು ಇದೆ ಎಂದರೆ ಸರಿ.

ವಿಜಯಕುಮಾರ ಎನ್ನುವವರಿಗೂ ಕೂಡ ನಮ್ಮ ತಾಯಿ ಯಾವುದೆ ಕಾರಣವಿಲ್ಲದೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಸಾಲ ಇದ್ದುದರಿಂದ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ವಾದಿಗೆ ಪಾಲು ಹೋಗಬಾರದು ಎಂಬ

ಉದ್ದೇಶದಿಂದ ೫ ರಿಂದ ೮ನೇ ಪ್ರತಿವಾದಿಗಳ ಹೆಸರಿನಲ್ಲಿ ಖರೀದಿ ಪತ್ರಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ನಮಗೆ ಸಾಲ ಇದ್ದುದರಿಂದ ಮಾರಾಟ ಮಾಡಿರುತ್ತೇವೆ ಎನ್ನುತ್ತಾರೆ. ೫ನೇ ಪ್ರತಿವಾದಿ ಬಾಗುಬಾಯಿ ನಮ್ಮ ತಾಯಿಯ ತಂಗಿಯಾಗಿರುತ್ತಾರೆ. ದಾವಾ ಆಸ್ತಿಗಳು ಇವತ್ತಿಗೂ ಕೂಡಾ ನಮ್ಮ ಸ್ವಾಧೀನದಲ್ಲಿಯೆ ಇರುತ್ತವೆ ಎಂದರೆ ಸರಿಯಲ್ಲ. ವಾದಿಗೆ ಆಸ್ತಿ ಹೋಗಬಾರದು ಎಂಬ ಉದ್ದೇಶದಿಂದ ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

೫. ನಮ್ಮ ಮನೆತನಕ್ಕೆ ಇದ್ದ ಸಾಲದ ಕುರಿತು ನಮ್ಮ ಪ್ರತಿವಾದ ಪತ್ರದಲ್ಲಿ ಬರೆಸಿದ ಕುರಿತು ನನಗೆ ಗೊತ್ತಿಲ್ಲ. ಈ ದಾವೆ ಹೂಡಿದ ನಂತರ ಖರೀದಿ ಪತ್ರಗಳನ್ನು ಸೃಷ್ಟಿಸಿಕೊಂಡು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.